ಶ್ರೀ ಎ. ಎ. ನರಸಿಂಹರೆಡ್ಡಿ.—ಈ ಜಿಲ್ಲಾ ಬೋರ್ಡುಗಳ ಆಡಳಿತವನ್ನು ಜಿಲ್ಲಾಧಿಕಾರಿಗಳಿಗೇ ವಹಿಸಿಬಿಡಬೇಕೆಂಬ ವಿಚಾರವಾಗಿ ಸರ್ಕಾರದಲ್ಲಿ ಏನಾದರೂ ಆಲೋಚನೆಗಳು ನಡೆಯುತ್ತಿವೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ನಿಸ್ಪ್ರಕ್ಷ್ಬೋರ್ಡ್ ಚುನಾವಣೆಗಳನ್ನು ಡೈರೆಕ್ಟ್ ಎಲೆಕ್ಷನ್ ಮುಖಾಂತರ ಮಾಡುವುವಕ್ಕೆ ಏರ್ಪಾಡು ಮಾಡುತ್ತಿದ್ದೀರಾ ?

Sri T. CHANNIAH.—Sri Venkatappa Committee has recommended indirect elections to the District Boards.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ಈ ಚುನಾವಣೆಗಳನ್ನೆಲ್ಲಾ ಇನ್ನೂ ಎಷ್ಟು ಕಾಲದವರೆಗೆ ಹೀಗೆ ಮುಂದುವರಿಸಿಕೊಂಡು ಹೋಗಬೇಕೆಂದು ಆಲೋಚನೆ ಮಾಡುತ್ತಿದ್ದೀರಿ ?

ಶ್ರೀ ಟಿ. ಚೆನ್ನಯ್ಯ.—ಚುನಾವಣೆಗಳನ್ನು ಸಾಧ್ಯವಾದಷ್ಟು ಜಾಗ್ರತೆ ನಡೆಸಲು ಏರ್ಪಾಡು ಮಾಡಲಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾಲ್ಲೂಕು ಬೋರ್ಡುಗಳನ್ನು ಮಾಡಬೇಕೆಂಬುದು ಸರ್ಕಾರದವರ ಗಮನದಲ್ಲಿದೆಯೇ ?

Sri T. CHANNIAH.—Not at present.

Forest land released for cultivation or colonisation.

Q.—299. Sri K. PRABHAKAR (Nelamangala—Scheduled Castes).—

Will the Government be pleased to state :—

the total extent of land that could be released for cultivation or colonisation from out of the forests in Mysore ?

A.—Sri T. CHANNIAH (Minister for Public Health and Local Self-Government).—

No area from the existing forest land in Mysore can be released as a rule either for cultivation or for colonisation.

ಶ್ರೀ ಕೆ. ಪ್ರಭಾಕರ್.—ಈಗ ಹೆಸರಿಗೆ ಮಾತ್ರ ಅರಣ್ಯವಾಗಿದ್ದು ಅರಣ್ಯ ಶಾಖೆಯವರ ಆಡಳಿತದಲ್ಲಿರುವ ಅರಣ್ಯಗಳಲ್ಲಿ ವ್ಯವಸಾಯಕ್ಕೆ ಯೋಗ್ಯವಾದಂಥ ಜಮೀನು ಎಷ್ಟಿರಬಹುದೆಂಬುದನ್ನು ಪರಿಶೀಲನೆ ಮಾಡಿ ನೋಡಿದರೆ ಅಂಥ ಜಮೀನು ಬಹಳವಾಗಿರುತ್ತದೆಂಬುದು ಸರ್ಕಾರದವರಿಗೆ ಗೊತ್ತಾಗಬಹುದಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅರಣ್ಯ ಪ್ರದೇಶಗಳೆಂದು ಪರಿಗಣಿಸಲಾಗಿರುವ ಪ್ರದೇಶಗಳಲ್ಲಿ ಸಾಗುವಳಿಗೆ ಕೊಡತಕ್ಕ ಜಮೀನು ಇರುವುದಿಲ್ಲ. ಫಾರೆಸ್ಟುಗಳ ಅಭಿವೃದ್ಧಿ ಮತ್ತು ಬಡಾವಣೆಗೂ ಅಭಿವೃದ್ಧಿಗೂ ಸಾಕಾಗುವಷ್ಟು ಭೂಮಿಯನ್ನು ಉಳಿಸಿಕೊಳ್ಳಬೇಕಾದುದು ಅವಶ್ಯಕ. ಫಾರೆಸ್ಟುಗಳಲ್ಲಿ ವ್ಯವಸಾಯಕ್ಕೆ ಜಮೀನುಗಳನ್ನು ಏರ್ಪಾಡಾರಿ ಮಾಡಬೇಕಾದ ನಂದರ್ಭಗಳಲ್ಲಿ ಇಂಡಿಯಾ ಸರ್ಕಾರದ "National Forest Policy" ಯನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯಬೇಕಾಗಿದೆ.

ಶ್ರೀ ಕೆ. ಪ್ರಭಾಕರ್.—1950ನೆಯ ಇಸವಿಯಲ್ಲೇ ಅನೇಕ ದರಖಾಸ್ತುಗಳನ್ನು ತೆಗೆದುಕೊಂಡು ಈ ಫಾರೆಸ್ಟುಗಳಲ್ಲಿ ಜಂಗಲ್ ನಾಶವಾಗಿ ಹೋಗಿರತಕ್ಕಂಥ ಪ್ರದೇಶಗಳಲ್ಲಿ ಸಾವಿರಾರು ಎಕರೆ ಜಮೀನನ್ನು ವ್ಯವಸಾಯಕ್ಕೆ ಬಿಟ್ಟುಕೊಡರಾಗಿರುತ್ತದೆಂದು ತಿಳಿಸಿದ್ದಷ್ಟೆಕೆ, ಈಗ ಇನ್ನೂ ಏರ್ಪಾಡಾರಿಯಾಗದೆ ಹಾಗೆಯೇ ಪ್ರಾಮಿಸ್ ಮಾಡಿದ್ದ ಅರ್ಜಿಗಳಲ್ಲಿ ಅನೇಕ ಪೆಂಡಿಂಗ್

. . . . . .

Mr. SPEAKER.—You are making a speech. Question hour is over.

Procedure with respect to Andhra State Bill.

Mr. SPEAKER.—Hon'ble Members will have noticed from the Programme of Business that the Andhra State Bill is coming up for consideration during this Session. This Bill will be introduced in the Parliament, but, since it affects the State of Mysore, the proviso to article 3 of the Constitution requires that the views of each of the Houses in Mysore have to be ascertained with respect to the proposal to introduce the Bill as well as with respect to the provisions thereof. The procedure to be followed for the consideration of this measure will be as follows :—

The Leader of the House will first make a motion :

"That this House approves the proposal to introduce in Parliament the Andhra State Bill, 1953."